ನಾಡುಕಾಡುಗಳ ನಡುವಿನ ಅಂತಃಕರಣದ ತೊರೆಯಂತೆ ಕಾಣಿಸುವ ಮಹಾಶ್ವೇತಾ ದೇವಿ (ಜ. 14, 1926 – ಜು. 28, 2016) ಭಾರತೀಯ ಸಾಹಿತ್ಯ ಕಂಡ ಅಪೂರ್ವ ಲೇಖಕಿ. ಬರವಣಿಗೆಯನ್ನು ಚಳವಳಿಯೆಂದು ಬಗೆದರೂ ತಮ್ಮ ಕೃತಿಗಳಲ್ಲಿ ಕಲೆಯ ಕಸುಬುದಾರಿಕೆ ಉಳಿಸಿಕೊಂಡ ಅಗ್ಗಳಿಕೆ ಅವರದು. ಕಾಡುಗಳು, ಹಳ್ಳಿಗಳು, ಸಣ್ಣ–ದೊಡ್ಡ ನಗರಗಳು – ಎಲ್ಲೆಡೆಯೂ ಮಾನವೀಯತೆಯ ದೀಪವನ್ನು ಹಚ್ಚುತ್ತಾ ಹೊರಟ ಮಹಾಶ್ವೇತಾ ದೇವಿ, ಆ ಬೆಳಕಿನ ದಾರಿಯಲ್ಲಿ ತಾವೇ ಒಂದು ಬೆಳಕಿನಪುಂಜವಾಗಿ ರೂಪುಗೊಂಡಿದ್ದರು.

“ಜನಸಾಮಾನ್ಯರು ಚರಿತ್ರೆಯನ್ನು ನಿರ್ಮಿಸುತ್ತಾರೆ. ನನ್ನ ಮೂಲಕ ಅವರೇ ಬರವಣಿಗೆ ಮಾಡಿದ್ದಾರೆ” ಎಂದು ಹೇಳಿದ ಮಹಾಶ್ವೇತಾ ದೇವಿ ಅವರ ಮಾತು, ‘ವೀರನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ’ ಎಂದು ಬಣ್ಣಿಸಿಕೊಂಡ ಗದುಗಿನ ನಾರಾಣಪ್ಪನ ಮಾತನ್ನು ನೆನಪಿಗೆ ತರುತ್ತದೆ. ಆದರೆ, ನಾರಾಣಪ್ಪನಂತೆ ಮಹಾಶ್ವೇತಾ ದೇವಿ ಅವರು ಕರ್ತೃವಿನ ಜಾಗದಲ್ಲಿ ದೇವರನ್ನು ಕೂರಿಸಲಿಲ್ಲ. ಅವರು ತಮ್ಮೆಲ್ಲ ಬರವಣಿಗೆಯ ಜೀವದ್ರವ್ಯವಾಗಿ ಪರಿಭಾವಿಸಿದ್ದು ನಾಗರಿಕ ಪ್ರಪಂಚದ ಕಡೆಗಣ್ಣಿಗೆ ಗುರಿಯಾಗಿರುವ ಆದಿವಾಸಿಗಳನ್ನು. ತಮ್ಮನ್ನು ತಾವು ‘ಶಬರರ ತಾಯಿ’ ಎಂದು ಮಹಾಶ್ವೇತಾ ದೇವಿ ಕರೆದುಕೊಂಡಿದ್ದರು. ಬಹುತೇಕ ಸಂದರ್ಭಗಳಲ್ಲಿ ಇಂಥ ಹೇಳಿಕೆಗಳು ತೋರಿಕೆಯ ಪ್ರದರ್ಶನಗಳಾಗಿರುತ್ತವೆ. ಆದರೆ, ಮಹಾಶ್ವೇತಾ ಅವರ ಸಂದರ್ಭದಲ್ಲಿ ಈ ಹೇಳಿಕೆ ಅವರ ಬದುಕು–ಬರಹದ ಒಂದು ಭಾಗವಾಗಿಯೇ ಇರುವುದು ವಿಶೇಷ. ಮಾತು–ಕೃತಿ–ಬರವಣಿಗೆ ಅಭಿನ್ನ ಎನ್ನುವಂತೆ ನಡೆದುಕೊಂಡ ಅನನ್ಯ ಬರಹಗಾರ್ತಿ ಅವರು.

ಮಹಾಶ್ವೇತಾ ದೇವಿ ಅವರು ದೇಶ ಕಂಡ ಬಹುದೊಡ್ಡ ಲೇಖಕಿ ಎನ್ನುವಂತೆಯೇ, ಸಮಕಾಲೀನ ಸಮಾಜ ಕಂಡ ಅಸಾಧಾರಣ ಮಾನವತಾವಾದಿಯೂ ಹೌದು. ಆದಿವಾಸಿಗಳು ಹಾಗೂ ಅವಕಾಶವಂಚಿತರ ಬಗ್ಗೆ ದಣಿವರಿಯದ ನಿರಂತರ ಹೋರಾಟ ನಡೆಸಿದ ಅವರು, ವ್ಯವಸ್ಥೆಯ ಆತ್ಮವಿಶ್ಲೇಷಣೆಗೆ ಒತ್ತಾಯಿಸಿದರು; ನಿಜದ ಸೂಜಿಮೊನೆಯಿಂದ ಮಾತಿನ ಬಲೂನುಗಳನ್ನು ಚುಚ್ಚುತ್ತಲೇ ಬಂದರು.